ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂ.: 18/2023

.............................................................................

CW 06
PW 06

| | | |
|---|---|---|
| ಹೆಸರು | : | ಕಿರಣ ಹೊನ್ನಣ್ಣವರ |
| ತಂದೆಯ ಹೆಸರು | : | ಅಭಯಕುಮಾರ್ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ವೈದ್ಯರು |
| ವಾಸಸ್ಥಳ | : | ಧಾರವಾಡ. |

ದಿನಾಂಕ 02-03-2026 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ನಾನು ಜೂನ್ 2021 ರಿಂದ ಜೂನ್ 2023 ರ ವರೆಗೆ ಹಳಿಯಾಳ ಸರ್ಕರಿ ಆಸ್ಪತ್ರೆಯಲ್ಲಿ ವೈದ್ಯನಾಗಿ ಕೆಲಸ ಮಾಡಿದ್ದೇನೆ.

ಸಾಕ್ಷಿಗೆ ನಿಪಿ 6 ಅನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಲಾಗಿದ್ದು, ಅವರ ಸಹಿಯನ್ನು ನಿಪಿ 6 ಬಿ ಎಂದು ಗುರುತಿಸಲಾಯಿತು.

ದಿನಾಂಕ 09-12-2022 ರಂದು ಮಧ್ಯಾಹ್ನ 03-15 ಗಂಟೆಗೆ ಚಾಸಾ 4 ರವರನ್ನು ಚಾಸಾ 1 ರವರು ಅದೇ ದಿನ ಬೆಳಿಗ್ಗೆ 11-00 ಗಂಟೆಗೆ ಅವರ ಮಗನಿಂದ ಆದ ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಹಳಿಯಾಳ ಸರ್ಕಾರಿ ಆಸ್ಪತ್ರೆಗೆ ಬಂದಿದ್ದರು. ಅವರನ್ನು ತಪಾಸಣೆ ಮಾಡಿದಾಗ ಅವರ ಬಲಗೈ ಮೇಲೆ ಗಾಯದ ಗುರುತುಗಳು ಇದ್ದವು, ನೋವು ಎಂದು ತಿಳಿಸಿದರು. ಅವರಿಗೆ ರಕ್ತಗಾಯಗಳು ಅಥವಾ ಮೂಳೆ ಮುರಿತ ಆಗಿರಲಿಲ್ಲ, ಆದ್ದರಿಂದ ನಾನು ಅವರಿಗೆ ಚಿಕಿತ್ಸೆ ನೀಡಿ ಅವರಿಗೆ ಆದ ಗಾಯಗಳು ಸಾಮಾನ್ಯ ಸ್ವರೂಪದು ಎಂದು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ.

**ಪಾಟೀ ಸವಾಲು :** ಆರೋಪಿಯ ಪರ ಶ್ರೀ ಎಮ್ ಎಮ್ ಎಚ್ ವಕೀಲರಿಂದ.

ಚಾಸಾ 1 ರವರು ತಮ್ಮ ಮಗನಿಂದ ಚಾಸಾ 4 ರವರಿಗೆ ಹಲ್ಲೆಯಾಗಿದೆ ಎಂದು ನಿಮಗೆ ಹೇಳಿಲ್ಲ ಎಂದರೆ ಸರಿಯಲ್ಲ. ಒಬ್ಬ ವ್ಯಕ್ತಿ ಜಾರಿ ಬಿದ್ದಾಗ ಚಾಸಾ 4 ರವರಿಗೆ ಆದ ರೀತಿಯ ಗಾಯಗಳು ಆಗಬಹುದು ಎಂದರೆ ಸರಿ. ಸಾಕ್ಷಿ ಮುಂದುವರೆದು ಯಾವುದೇ ಘನ ವಸ್ತುವಿನಿಂದ ಹೊಡೆದಾಗ ಆ ರೀತಿಯ ಗಾಯಗಳು ಆಗುವ ಸಾಧ್ಯತೆಗಳು ಇರುತ್ತವೆ ಎನ್ನುತ್ತಾರೆ. ಒಬ್ಬ ವ್ಯಕ್ತಿಗೆ ಕಟ್ಟಿಗೆಯಿಂದ ಹೊಡೆದಾಗ ಹೊಡೆದ ನಂತರ 4 ಗಂಟೆಗಳವರೆಗೆ ಆ ವ್ಯಕ್ತಿಗೆ ತಡೆದುಕೊಳ್ಳಲು ಆಗುವುದಿಲ್ಲ ಎಂದರೆ ಸಾಕ್ಷಿ ಸಾಮಾನ್ಯ ಗಾಯಗಳು ಇದ್ದಾಗ ತಡೆದುಕೊಳ್ಳಬಹುದು ಎನ್ನುತ್ತಾರೆ. ಚಾಸಾ 1 ಮತ್ತು 4 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಈ ರೀತಿಯಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಚಾಸಾ 4 ರವರಿಗೆ ಚಿಕಿತ್ಸೆ ಮಾತ್ರ ನೀಡಿದ್ದೀರಾ ಅಥವಾ ಮುಂದಿನ ಕ್ರಮ ಕೈಗೊಂಡಿದ್ದೀರಾ ಎಂದರೆ ಸಾಕ್ಷಿ ಎಮ್ ಎಲ್ ಸಿ ಆಗಿದೆ ಎನ್ನುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.